**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ**

<u>ಸಿಸಿ ಸಂಖ್ಯೆ 237/2013</u>

PW-1

| | | |
|---|---|---|
| ಹೆಸರು | : | ಕೋಟೇಗೌಡ |
| ತಂದೆ/ಗಂಡನ ಹೆಸರು | : | ನರಸಿಂಹೇಗೌಡ |
| ವಯಸ್ಸು | : | 58 ವರ್ಷ |
| ವೃತ್ತಿ | : | ಸಹಾಯಕ ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | : | ತಿ.ನರಸೀಪುರ ಪೊಲೀಸ್ ಠಾಣೆ |
| ದಿನಾಂಕ | : | **17-11-2022** |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿದಾರರ ವಿಚಾರಣೆಃ**

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

<u>**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**</u>

ನಾನು ದಿನಾಂಕ **21/08/2021** ರಿಂದ ಇಲ್ಲಿಯವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಸಹಾಯಕ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿಯ ಆರೋಪಿತರು ತಲೆಮರೆಸಿಕೊಂಡಿರುತ್ತಾರೆ. ಅವರ ಹಾಜರಾತಿಗಾಗಿ ಉದ್ಘೋಷಣೆ ಮತ್ತು ಜಪ್ತಿ ವಾರೆಂಟನ್ನು ಹೊರಡಿಸಲಾಗಿತ್ತು. ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿತರ ವಿಳಾಸಕ್ಕೆ ಹೋಗಿ ವಿಚಾರಿಸಿದಾಗ ಆರೋಪಿತರ ಸುಳಿವು ಸಿಕ್ಕಿರುವುದಿಲ್ಲ. ಆದ್ದರಿಂದ ದಿನಾಂಕ **08/09/2021** ಮತ್ತು **09/09/2021** ರಂದು ಆರೋಪಿತರು ಹಿಂದೆ ವಾಸವಾಗಿದ್ದ ಗ್ರಾಮಗಳಿಗೆ ಹೋಗಿ ವಿಚಾರಿಸಿದಾಗ ಆರೋಪಿತರ ಸುಳಿವು ಸಿಕ್ಕಿರುವುದಿಲ್ಲ ಮತ್ತು ಅವರು ತಲೆಮರೆಸಿಕೊಂಡಿದ್ದಾರೆ ಎಂದು ತಿಳಿದುಬಂದಿರುತ್ತದೆ. ಆನಂತರ ನಾನು ಗ್ರಾಮಗಳ ವಿವಿಧ ಸ್ಥಳಗಳಲ್ಲಿ ಟಾಮ್ ಟಾಮ್ ಹೊಡೆಯಿಸಿ ಇಸ್ತಿಹಾರ್ ಮಾಡಿರುತ್ತೇನೆ. ನಂತರದಲ್ಲಿ ಗ್ರಾಮಗಳಲ್ಲಿಯ ಹಾಗೂ ಇತರ ಸ್ಥಳಗಳಲ್ಲಿಯ ಜನನಿಬಿಡ ಪ್ರದೇಶಗಳಲ್ಲಿ ಉದ್ಘೋಷಣಾ ಪ್ರತಿಗಳನ್ನು ಲಗತ್ತಿಸಿ ಸ್ಥಳೀಯ ಪಂಚರ ಸಮಕ್ಷಮ ಪಂಚನಾಮೆಗಳನ್ನು ಕ್ರಮ ಜರುಗಿಸಿರುತ್ತೇನೆ. ನಾನು ಜರುಗಿಸಿರುವ ಪಂಚನಾಮೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿ.ಪಿ.**1** ಮತ್ತು **2** ಎಂದು

ಗುರುತಿಸಿ ಅವುಗಳಲ್ಲಿರುವ ನನ್ನ ಸಹಿಗಳನ್ನು ನಿ.ಪಿ.1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ನಿ.ಪಿ.1 ಮತ್ತು 2 ಪಂಚನಾಮೆಗಳಿಗೆ ಶಿವು, ವೀರತ್ತಪ್ಪ, ನಾಗರಾಜು ಮತ್ತು ಕೆ.ಬಿ.ಪ್ರಕಾಶ್ ಇವರುಗಳು ಪಂಚರಾಗಿ ಸಹಿಗಳನ್ನು ಹಾಕಿರುತ್ತಾರೆ.

ಆರೋಪಿತರ ಹಾಜರಾತಿಯನ್ನು ಅಗತ್ಯಪಡಿಸುವ ಕುರಿತು ಜಪ್ತಿ ವಾರೆಂಟನ್ನು ಹೊರಡಿಸಲಾಗಿತ್ತು. ಈ ಬಗ್ಗೆ ಆರೋಪಿತರ ವಿಳಾಸದಲ್ಲಿ ವಿಚಾರಿಸಿದಾಗ ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲವೆಂದು ತಿಳಿದುಬಂದಿರುತ್ತದೆ. ಅದಲ್ಲದೇ ಬದನಗುಪ್ಪೆ ಗ್ರಾಮ ಪಂಚಾಯ್ತಿ, ಕುದೇರು ಗ್ರಾಮಪಂಚಾಯ್ತಿ ಇವರು ವರದಿಗಳನ್ನು ನೀಡಿರುತ್ತಾರೆ. ಅದೇ ರೀತಿ ನಮ್ಮ ಠಾಣೆಯಿಂದ ಕೂಡ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿ.ಪಿ.3 ರಿಂದ 5 ರವರೆಗೆ ಗುರುತಿಸಲಾಯಿತು.

ನಾನು ಉದ್ಘೋಷಣೆ ಹೊರಡಿಸುವ ಮುಂಚೆ ನಮ್ಮ ಠಾಣೆಯ ರಾಮಸ್ವಾಮಿ ಇವರೂ ಕೂಡ ಆರೋಪಿತರನ್ನು ಅಗತ್ಯಪಡಿಸುವ ಕುರಿತು ಅವರು ವಾಸವಾಗಿದ್ದ ಸ್ಥಳಗಳಿಗೆ ಹೋಗಿ ವಿಚಾರಿಸಿ ಪ್ರೊಕ್ಲಮೇಶನ್ ಮಹಜರುಗಳನ್ನು ಜರುಗಿಸಿರುತ್ತಾರೆ. ಸದರಿ ಮಹಜರುಗಳನ್ನು ಈಗ ನಿ.ಪಿ.6 ಮತ್ತು 7 ಎಂದು ಗುರುತಿಸಲಾಯಿತು.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.